230 ಟನ್ ಹೆಚ್ಚು ಕ್ರಷಿಂಗ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇದು ಸರಿಯೋ ತಪ್ಪೋ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಶಿವಪ್ಪ (ಸಕ್ಕರೆ ಸಚಿವರು) :— ಮಾನ್ಯ ಅಧ್ಯಕ್ಷರೆ, ಕಾರ್ಖಾನೆಯ ಆಧುನೀಕರಣ ಆಗುವುದಕ್ಕಿಂತ ಮುಂಚೆ ಸಾರಾಸಗಟಾಗಿ 1300-400 ಟನ್‌ಗಳಷ್ಟು ಕ್ರಷ್‌ಮಾಡಿದ್ದಾರೆ. ಇದು 1992ರ ವರೆಗಿನ ವಿಚಾರ. ಈ ಆಧುನೀಕರಣ 1750ಟನ್ ಗಳವರೆಗೆ ಕ್ರಷಿಂಗ್ ಕೆಪಾಸಿಟಿಯು ಇನ್‌ಕ್ರೀಸ್ ಆಗಿದೆ. 298 ಲಕ್ಷ ರೂ.ಗಳನ್ನು ಅದಕ್ಕಾಗಿ ಖರ್ಚು ಮಾಡಿದ್ದೇವೆ. ಅಲ್ಲಿ ಹೆಚ್ಚು ಕ್ರಷಿಂಗ್ ಕೆಪ್ಯಾಸಿಟಿಯನ್ನು ಮಾಡಬೇಕೆಂದು ಉದ್ದೇಶದಿಂದ ಕೆಲವು ಹೆಚ್ಚುವರಿ ಮಶಿನರಿಗಳನ್ನು ಸೇರಿಸಿದ್ದೇವೆ. ಈಗ ಮತ್ತೆ ಎಕ್ಸ್‌ಪ್ಯಾನ್‌ಶನ್‌ಗೆ ಹೋಗಬೇಕೆಂದು ಮತ್ತೊಂದು ಪ್ರಾಜೆಕ್ಟ್ ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಿದ್ದಾರೆ. ಅದರ ಪ್ರಕಾರ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿ.ಎಸ್. ಕೌಜಲಗಿ :— ಸಚಿವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಕಾರ್ಖಾನೆಯ ಆಡಿಟ್ ವರದಿಯಲ್ಲಿ 367 ಲಕ್ಷ ರೂ.ಗಳು ಎಂದು ಹೇಳಿದ್ದಾರೆ. ಇಲ್ಲಿ ನೀವು ಬೇರೆ ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ? ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಶಿವಪ್ಪ :— ಅದು ಸುಳ್ಳು, ಇದು ಸರಿ ಎಂದು ಹೇಳುವ ಪ್ರಶ್ನೆ ಅಲ್ಲ. ನಾವು ಇಲ್ಲಿ ಉತ್ತರ ಕೊಟ್ಟಿರುವುದು ಸರಿ.

ಶ್ರೀ ವಿ.ಎಸ್. ಕೌಜಲಗಿ :— ಈ ಬಗ್ಗೆ ಸಂಪೂರ್ಣವಾದ ಒಂದು ತನಿಖೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ :— ಅಧ್ಯಕ್ಷರೇ, The audit report is not very much before us. It is only a oral statement.

ಶ್ರೀ ವಿ.ಎಸ್. ಕೌಜಲಗಿ :— ಅಲ್ಲಿ ಕೊಟ್ಟಿರುವ ಆಡಿಟ್ ವರದಿಯನ್ನು ನೋಡಿ. 1993-94ರ ವರದಿಯನ್ನು ನೋಡಿ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಹೆಚ್. ಶಿವಪ್ಪ :— ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

<u>ಗದಗ-ಬೆಟಗೇರಿ ನಗರದಲ್ಲಿ ಸಂಭವಿಸಿದ ಗಲಭೆಯಿಂದ ಹಾನಿಗೊಳಗಾದವರಿಗೆ ಪರಿಹಾರ.</u>

35(554) ಶ್ರೀ ಡಿ.ಆರ್. ಪಾಟೀಲ್, (ಗದಗ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ರಚನೆಯ ಪೂರ್ವದಲ್ಲಿ ಗದಗ ನಗರದಲ್ಲಿ ಸಂಭವಿಸಿದ ಗಲಭೆಯಿಂದ ಗದಗ-ಬೆಟಗೇರಿ ನಗರಸಭೆಯ ಆಸ್ತಿಗೆ ಉಂಟಾದ ನಷ್ಟ ಎಷ್ಟು?

ಆ) ಈ ನಷ್ಟವನ್ನು ತುಂಬಿಕೊಂಡಲು ಸರ್ಕಾರ ಬಿಡುಗಡೆ ಮಾಡಿದ ಪರಿಹಾರ ಧನ ಎಷ್ಟು?

ಇ) ಉಳಿದ ಪರಿಹಾರ ಧನವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ಸರ್ಕಾರದವರು ಬಿಡುಗಡೆ ಮಾಡುವರೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಅಂದಾಜು ರೂ. 3,11,84,000

ಆ) 1998-99ನೇ ಸಾಲಿನಲ್ಲಿ ರೂ. 25.00 ಲಕ್ಷ ಪರಿಹಾರ ಧನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಅಲ್ಲಿ ಮೂರು ಕೋಟಿ 12 ಲಕ್ಷ ರೂ.ಗಳವರೆಗೆ ನಷ್ಟ ಸಂಭವಿಸಿದಾಗ ಅದಕ್ಕೆ ಎಂದು 25 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವುದೇ ಯೋಗ್ಯ ಎಂದು ಹೇಳಿದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಕೊಟ್ಟಿದ್ದು ಕಡಿಮೆ ಎಂದು ಹೇಳಿ ಇನ್ನೂ ಸ್ವಲ್ಪ ಹಣಕಾಸಿನ ನೆರವನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ನೀವು ವಿರೋಧಪಕ್ಷದವರು ನಿಮಗೆ ಇಷ್ಟೇ ಕೊಡುವುದು ಅಂದರೆ ಇನ್ನೂ ಆರು ತಿಂಗಳ ಕಾಲ ಕಾಯುತ್ತೇವೆ. ನಾನು ಏನು ಮಾಡಬೇಕೆಂಬ ಬಗ್ಗೆ ಸನ್ಮಾನ್ಯ ಸಚಿವರು ಹೇಳಬೇಕು.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ :— ಮಾನ್ಯ ಅಧ್ಯಕ್ಷರೇ, ಈ ತರಹ ನಷ್ಟ ಸಂಭವಿಸಿದಾಗ ನೆರವನ್ನು ಕೊಡಬೇಕೆಂಬ ಬಗ್ಗೆ ನಮ್ಮಲ್ಲಿ ಪ್ರಾವಿಷನ್ ಇಲ್ಲ. ಆದರೂ ಕೂಡ ಮಾನ್ಯ ಡಿ.ಆರ್. ಪಾಟೀಲ್‌ರವರು ಮನವಿ ಮಾಡಿಕೊಂಡ ಮೇರೆಗೆ ವಾಹನಗಳನ್ನು ಖರೀದಿಸಲು 25 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ರೆಗ್ಯುಲರ್ ಗ್ರ್ಯಾಂಟ್ಸ್ ಜನವರಿ ತಿಂಗಳವರೆಗೆ 2 ಕೋಟಿ 20 ಲಕ್ಷಗಳನ್ನು ಸ್ಯಾಲರಿ ಮತ್ತು ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗಾಗಿ ರಿಲೀಸ್ ಮಾಡಿದ್ದೇವೆ. 13 ಲಕ್ಷ 90 ಸಾವಿರ ರೂ.ಗಳನ್ನು ವಿದ್ಯುಚ್ಛಕ್ತಿ ಮಂಡಳಿಗೆ ಕಟ್ಟಿದ್ದೇವೆ. ಮಾರ್ಚ್ ತಿಂಗಳವರೆಗಿನ ರೆಗ್ಯುಲರ್ ಗ್ರಾಂಟ್ಸ್‌ನ್ನೂ ಕೂಡ ಕೊಡುತ್ತೇವೆ. ಸಿ.ಆರ್. ಫಂಡ್‌ನ ಹಣವನ್ನು ಕಂದಾಯ ಇಲಾಖೆಯವರು

ಕೊಡಬೇಕಾಗುತ್ತದೆ. ನಾನು ಅವರಿಗೆ ತಮ್ಮ ಪರವಾಗಿ ಪತ್ರ ಬರೆದು ಕೊಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ :— ನಮಗೆ ರೂಟೀಸ್‌ನಲ್ಲಿ ಕೊಡುವುದನ್ನು ಸಚಿವರು ಹೇಳಿದ್ದಾರೆ. ನಾನು ವಿಶೇಷ ಅನುದಾನದ ಬಗ್ಗೆ ಕೇಳುತ್ತಿದ್ದೇನೆ. ಸುಮಾರು 3 ಕೋಟಿ 12 ಲಕ್ಷ ರೂ.ಗಳ ಅಂದಾಜು ಆ ಗಲಭೆಯಲ್ಲಿ ನಷ್ಟ ಸಂಭವಿಸಿದೆ. ಮುನ್ಸಿಪಾಲಿಟಿ ಆಸ್ತಿಯ ನಷ್ಟದ ಬಗ್ಗೆ ನಿಮ್ಮ ಇಲಾಖೆಯವರೇ ಅಂದಾಜು ಮಾಡಿಕೊಂಡು ಬಂದಿದ್ದಾರೆ. ಅದರ ಎದುರು ನೀವು ಕೇವಲ 25 ಲಕ್ಷ ರೂ.ಗಳನ್ನು ರಿಲೀಸ್ ಮಾಡಿದ್ದೀರಿ. ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ ಗದಗ ನಗರಸಭೆಗೆ ವಿಶೇಷ ಅನುದಾನವನ್ನು ಹಣಕಾಸಿನ ವರ್ಷದಲ್ಲಿ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಪಟೇಲ್ :— ಈ ತರಹದ ನಷ್ಟ ಸಂಭವಿಸಿದಲ್ಲಿ ನೆರವು ನೀಡುವ ಯಾವ ಪ್ರಾವಿಶನ್ ಇಲ್ಲದಿದ್ದರೂ ಕೂಡ 25 ಲಕ್ಷ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ನಮ್ಮಲ್ಲಿ ಬಂದರೆ ಆ ಕುರಿತು ಚರ್ಚೆ ಮಾಡೋಣ. ಸಿ.ಆರ್. ಫಂಡ್‌ನಿಂದ ಹೇಗೆ ನೆರವು ದೊರಕಿಸಿಕೊಳ್ಳಬಹುದು ಎಂದು ಮಾನ್ಯ ಕಂದಾಯ ಸಚಿವರಲ್ಲಿ ಚರ್ಚೆ ಮಾಡೋಣ.

ವಿಜಾಪುರ ನಗರ ಕೈಗಾರಿಕಾ ಪ್ರದೇಶದಲ್ಲಿನ ಪ್ಲಾಟುಗಳಿಗೆ ನಿಗದಿಪಡಿಸಿರುವ ಬೆಲೆ.

36(134) ಶ್ರೀ ಬಸವಗೌಡ ರಾಮನಗೌಡ ಪಾಟೀಲ್ (ಬಿಜಾಪುರ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದ ಕೈಗಾರಿಕಾ ಪ್ರದೇಶಗಳಲ್ಲಿನ ಪ್ರತಿಯೊಂದು ಪ್ಲಾಟುಗಳಿಗೆ ನಿಗದಿಪಡಿಸಿರುವ ಮೊಬಲಗು ಎಷ್ಟು?

ಆ) ಅನೇಕ ವರ್ಷಗಳ ಹಿಂದೆ ಮಂಜೂರಾತಿ ಮಾಡಿದ ಪ್ಲಾಟುಗಳಿಗೆ ಪ್ರಸಕ್ತ ನಿಗದಿಪಡಿಸಿದ ಬೆಲೆಗೆ ಹಣ ತುಂಬಲು ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರತಿ ಎಕರೆಗೆ ಪ್ರಸಕ್ತ ನಿಗಧಿಪಡಿಸಿರುವ ಮೊಬಲಗು ಎಷ್ಟು?

ಈ) ಬಿಜಾಪುರ ಜಿಲ್ಲೆಯು ಅತ್ಯಂತ ಹಿಂದುಳಿದ ಪ್ರದೇಶವಾಗಿರುವುದರಿಂದ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿನ ಪ್ಲಾಟುಗಳಿಗೆ ಪ್ರಸಕ್ತ ನಿಗಧಿಪಡಿಸಿರುವ ಮೊಬಲಗು ಸೂಕ್ತವೇ?